**ನ್ಯಾಯ ಸುಧಾಮಂಗಳ ಕನಕಾಭಿಷೇಕ**

ಬೆಂಗಳೂರು: ನಗರದ ಪೂರ್ಣಪ್ರಜ್ಞ ವಿದ್ಯಾಪೀಠದ ಆವರಣದಲ್ಲಿ ಕಳೆದ ಮೂರು ದಿನಗಳಿಂದ ನಡೆದ ೧೬ ನೆಯ ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ – ಹಾಗೂ ೫೧ನೆಯ ಮಾಧ್ಯ ರಾದ್ಧಾಂತ ಸಂವರ್ಧಕ ಸಭೆಯ ಅದಿವೇಶನವು ಫೆ. ೨೦ರ ಭಾನುವಾರ ಕಿಕ್ಕಿರಿದು ನೆರೆದಿದ್ದ ಹತ್ತಾರು ಸಾವಿರ ಮಂದಿ ಭಕ್ತರ ಸಮ್ಮುಖದಲ್ಲಿ ವೈಭವದ ಸಮರೋಪ ಕಂಡಿತು. ಕೊನೆಯ ದಿನದಂದು ಪ್ರಮುಖ ಪಲಿಮಾರು ಭಂಡಾರಕೇರಿ ಮಠದ ಹಿರಿಯ ಶ್ರೀಗಳಾದ ಶ್ರೀವಿದ್ಯಾಮಾನ್ಯ ತೀರ್ಥರಿಗೆ ಕನಕಾಭಿಷೇಕ ಮತ್ತು ರಜತ ತುಲಾಭಾರ ಹಾಗೂ ಪೇಜಾವರ ಶ್ರೀಗಳು ನಡೆಸಿದ ೧೩ನೆಯ ನ್ಯಾಯ ಸುಧಾಮಂಗಳ ಕಾರ್ಯಕ್ರಮಗಳು ಕಣ್ಮನ ತಣಿಸಿದವು.

ಶ್ರೀ ಮದಣು ವ್ಯಾಖ್ಯಾನ ಮತ್ತು ನ್ಯಾಯ ಸುಧಾಮಂಗಳ ನಡೆಸಿಕೊಟ್ಟ ಮಾತನಾಡಿದ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಶ್ರೀ ಮರಣ ವ್ಯಾಖ್ಯಾನದಲ್ಲಿರುವ 'ಹರಿಸರ್ವೋತ್ತಮತ್ವ'ದ ವಿವರಣೆ ನೀಡಿ 'ನಾವಿರುವ ಜಗತ್ತು ಸತ್ಯ'ವೆಂದು ಸ್ವಾರಸ್ಯಕರವಾಗಿ ವಿವರಿಸಿದರು. ಹಗ್ಗವೊಂದನ್ನು ಹಾವೆಂದು ಭ್ರಮಿಸಬೇಕಾದರೆ, ಹಾವಿನ ಬಗೆಗಿನ ಸಂಸ್ಕಾರವಿರಬೇಕು,ಹಗ್ಗವು ಹಾವಿನಂತೆ ಕಾಣುವ ಸಂದರ್ಭ ಏರ್ಪಟ್ಟಿರಬೇಕು ಮತ್ತು ಹಗ್ಗಕ್ಕೆ ಹಾವಿನ ಆಕಾರ ಸಾಮ್ಯವಿದ್ದಿರಬೇಕು, ಹಾಗೆಯೇ ಜಗತ್ತು ಮಿಥ್ಯವೆಂದು ವಾದಿಸುವಾಗ ಈ ಮೂರು ರೀತಿಗಳಲ್ಲಿ ಜಗತ್ತು ಸತ್ಯವೆಂಬುದನ್ನು ಸ್ವೀಕರಿಸಬೇಕಾಗುತ್ತದೆ ಆದರಿಂದ ಜಗತ್ತು ಸತ್ಯ ಎಂದು ಶ್ರೀಗಳು ನುಡಿದರು.

ಹರಸರ್ವೋತ್ತಮತ್ವವನ್ನು ವಿವರಿಸುತ್ತಾ ಶ್ರೀ ಹರಿಯನ್ನು ಮಡಕೆ ಮಾಡುವಾಗ ಕುಂಬಾರನಿಗೆ ಅಥವಾ ದೇಶವನ್ನಾಳುವ ರಾಜನಿಗೆ ಹೋಲಿಸಬಹುದಾದರೂ ಇವೆರಡಕ್ಕೂ ಮಿಗಿಲಾಗಿ ಅವನಿದ್ದಾನೆಂದು ಹೇಳಿದ ಶ್ರೀಗಳು, ಅನಂತಗುಣ ಪರಿಪೂರ್ಣವಾದ ಶ್ರೀ ಹರಿ ಭಿನ್ನವಾಗಿದ್ದು ಜಗತ್ತಿನ ಸಂಪೂರ್ಣ ನಿಯಂತ್ರಣ ಹೊಂದಿದ್ದಾನೆಂದರು. ಶ್ರೀ ಮದಣುವ್ಯಾಖ್ಯಾನದ ನಾಲ್ಕು ಅಧ್ಯಾಯಗಳು ಹರಿಸರ್ವೋತ್ತಮತ್ವ, ಜಗತ್ತಿನ ಪೂರ್ಣಸತ್ಯತೆ, ವೈರಾಗ್ಯ ಹಾಗೂ ಮೋಕ್ಷವಿಚಾರಗಳನ್ನು ತಿಳಿಸುವುದರಿಂದ ಈ ನಾಲ್ಕು ಅಧ್ಯಾಯಗಳನ್ನು ಶ್ರೀರಾಮ, ಲಕ್ಷ್ಮಣ, ಭರತ, ಶತ್ರುಘ್ನರಿಗೆ ಹೋಲಿಸಬಹುದೆಂದರು.

ಇದೇ ವೇಳೆ ಬಾಳೆಗಾರು ಮಠದ ಶ್ರೀ ರಘುಭೂಷಣ ತೀರ್ಥರು ಅನುಗ್ರಹ ಭಾಷಣ ಮಾಡಿ ಎರಡು ಶ್ರೇಷ್ಠಕೃತಿಗಳಾದ ಪಾಶುಪತಿ ಸ್ಮೃತಿ ಮತ್ತು ಪಂಚರಾತ್ರ ಸ್ಮೃತಿಗಳಲ್ಲಿನ ಪ್ರಕ್ಷೇಪ ಸಂಕ್ಷೇಪಗಳ ವಿವರಣೆ ನೀಡಿ ಪಂಚರಾತ್ರಿ ಸ್ಮೃತಿಯಲ್ಲಿನ ಜಗತ್ತು ಸತ್ಯ ಮತ್ತು ಹರಿಸರ್ವೋತ್ತಮತ್ವಗಳ ವಿವರಣೆಗೆ ವೇದ ಪ್ರಮಾಣವಿರುವುದರಿಂದ ಅದು ಸ್ವೀಕಾರಾರ್ಹ ಎಂದರು. ಈ ಬಾರಿಯ ನ್ಯಾಯಸುಧಾ ಮಂಗಳದಲ್ಲಿ ೨೧ ವಿದ್ಯಾರ್ಥಿಗಳು ಸುಧಾ ಪಾಠ ಮುಗಿಸಿ ಸ್ನಾತಕ ಪಡೆದರು. ಕಾರ್ಯಕ್ರಮದ ಮುನ್ನ ನ್ಯಾಯಸುಧಾ ಪಾಠ ಮುಗಿಸಿರುವ ಇಬ್ಬರು ವಿದ್ಯಾರ್ಥಿಗಳಾದ ಎಂ.ನಾರಾಯಣ ಹಾಗೂ ಜೋಷಿಯವರು ವಾದ – ವಿವಾದ ನಡೆಸಿದರು.

*ಮತಿಕುಲಭೀಷ್ಮರಿಗೆ ರಜತ ತುಲಾಭಾರ*

ತತ್ವಜ್ಞಾನ ಸಮ್ಮೇಳನದ ಅವಧಿಯಲ್ಲಿ ೮೦ನೆಯ ವರ್ಧಂತ್ಯುತ್ಸವ ಆಚರಿಸುತ್ತಿರುವ ಫಲಿಮಾರು ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ ತೀರ್ಥರನ್ನು ಮಹಾಭಾರತದ ಭೀಷ್ಮರಿಗೆ ಹೋಲಿಸಲಾಯಿತು. ಸಮ್ಮೇಳನಾಧ್ಯಕ್ಷ ಶ್ರೀ ವ್ಯಾಸನಕೆರೆ ಪಂಡಿತ ಪ್ರಭಂಜನಾಚಾರ್ಯರು ಮಾತನಾಡಿ ಶ್ರೀಗಳು ಬಾಲಬ್ರಹ್ಮಚಾರಿಗಳು, ವಿದ್ಯಾಮಾನ್ಯರು, ಶ್ರೀಕೃಷ್ಣನಿಗೆ ಅಗ್ರಪೂಜೆ ಸಲ್ಲಿಸಿ ವಜ್ರಕಿರೀಟ ಅರ್ಪಿಸಿದವರು ಹಾಗೂ ಮಾಧ್ವ ಪಕ್ಷದವರು ಎಂದು ಹೇಳಿದರು. ಮಹಾಭಾರತದ ಭೀಷ್ಮ ೮೦೦ ವರ್ಷ ಬದುಕಿದರೂ ವಿದ್ಯಾದಾನ

ಮಾಡಲಿಲ್ಲ. ಆದರೆ ೮೦ ವರ್ಷಗಳನ್ನು ಪೂರೈಸಿರುವ ಈ ಭೀಷ್ಮ ತನ್ನ ಜೀವನವನ್ನೆಲ್ಲಾ ಜ್ಞಾನದಾನ ಮಾಡುವುದರಲ್ಲೇ ಕಳೆದವರು ಎಂದು ಫಲಿಮಾರು ಕಿರಿಯ ಶ್ರೀಗಳು ನುಡಿದರು.

ಪುತ್ತಿಗೆ ಮಠದ ಶ್ರೀ ಸುಗಣೇಂದ್ರ ತೀರ್ಥ ಶ್ರೀಪಾದರು ಮಾತನಾಡಿ ಮಹಾಭಾರತದ ಭೀಷ್ಮರಿಗೆ ಕಲಿಯ ಆವೇಶವಿತ್ತು. ಈ ಭೀಷ್ಮರಿಗೆ ಕಲಿಕೆಯ ಆವೇಶವಿದೆ ಎಂದು ಹೇಳಿದರು. ಬಳಿಕ ಕಿಕ್ಕಿರಿದು ತುಂಬಿದ್ದ ಸಭಾಂಗಣದಲ್ಲಿ ಸಹಸ್ರಾರು ಜನರೆದುರು ವಿದ್ಯಾಮಾನ್ಯರಿಗೆ ಕನಕಾಭಿಷೇಕ ಹಾಗೂ ರಜತ ತುಲಾಭಾರ ನಡೆಸಲಾಯಿತು.

Feb 23rd 1994 Hosa Diganta Nyaya Sudhamangala Kanakabisheka.